ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2008-09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯುವ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಅಕಇ 29 ಆಸಂಯೋ 08, ದಿನಾಂಕ: 19.05.2008
2. ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರ ಕಡತ ಸಂಖ್ಯೆ: ಆಸಂವಿ/ಮೊದೇವಶಾ/CR-3/08-09, ದಿನಾಂಕ: 30.08.2008

**ಪ್ರಸ್ತಾವನೆ:**

ಉಲ್ಲೇಖ (1)ರಲ್ಲಿ ಓದಲಾದ ದಿನಾಂಕ: 19.05.2008ರ ಸರ್ಕಾರದ ಆದೇಶದಲ್ಲಿ 2008-09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ರಾಜ್ಯ ವಲಯ ಯೋಜನೆ ಹಾಗೂ ಜಿಲ್ಲಾ ವಲಯ ಯೋಜನೆಗಳನ್ನು ಮುಂದುವರೆಸಲು ಮಂಜೂರಾತಿ ನೀಡಿದೆ.

ಉಲ್ಲೇಖ (2)ರಲ್ಲಿ ಓದಲಾದ ಕಡತದಲ್ಲಿ ನಿರ್ದೇಶಕರು ಅಲ್ಪಸಂಖ್ಯಾತರ ಇಲಾಖೆ, ಇವರು ಏಕ ಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಈಗಾಗಲೇ ಅಲ್ಪಸಂಖ್ಯಾತರ ಇಲಾಖೆಯ 43 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿ ಹೊಸ ಶಾಲೆ ಪ್ರಾರಂಭಿಸಲು ಅಂದಾಜು ರೂ. 18.00 ಲಕ್ಷ ಅವಶ್ಯವಾಗಬಹುದೆಂದು, ಈ ಹೊಸ ಶಾಲೆಗಳ ಪ್ರಾರಂಭಿಸುವ ಕ್ರಮ KRIES (Karnataka Residential Institution Society) ರವರ ಮೂಲಕ ಕೈಗೊಳ್ಳಬೇಕಾಗಿದ್ದು, ಪ್ರಸಕ್ತ ವರ್ಷದಲ್ಲಿ 5 ಹೊಸ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಅನುದಾನ ಬಿಡುಗಡೆ ಮಾಡಲು ಸೂಕ್ತ ಆದೇಶವನ್ನು ಹೊರಡಿಸಲು ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಸಂಇ 105 ಆಸಂಯೋ 2008**
**ಬೆಂಗಳೂರು, ದಿನಾಂಕ: 05.09.2008**

ಪ್ರಸ್ತಾವನೆಯ ಅಂಶಗಳನ್ನು ಪರಿಶೀಲಿಸಿ 2008-09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಂಗ್ಲ ಮಾಧ್ಯಮದ ಕನ್ನಡ ಪ್ರಥಮ ಭಾಷೆಯಾಗಿ ಹಾಗೂ ಉರ್ದು ಅಥವಾ ಹಿಂದಿ ಎರಡನೇಯ ಭಾಷೆಯಾಗಿ ಈ ಕೆಳಕಂಡ 5 ನೂತನ ಅಲ್ಪಸಂಖ್ಯಾತರ ಮೊರಾಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ. ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಮಂಜೂರಾತಿ ನೀಡಿದ ಸ್ಥಳ |
|---|---|---|---|
| 1 | ಶಿವಮೊಗ್ಗ ಜಿಲ್ಲೆ | ಶಿಕಾರಿಪುರ ತಾಲ್ಲೂಕು | ಶಿರಾಳಕೊಪ್ಪ |
| 2 | ಚಿಕ್ಕಬಳ್ಳಾಪುರ ಜಿಲ್ಲೆ | ಚಿಕ್ಕಬಳ್ಳಾಪುರ ತಾಲ್ಲೂಕು | ಚಿಕ್ಕಬಳ್ಳಾಪುರ |
| 3 | ಚಿತ್ರದುರ್ಗಾ ಜಿಲ್ಲೆ | ಹಿರಿಯೂರು ತಾಲ್ಲೂಕು | ಹಿರಿಯೂರು |
| 4 | ಕೊಡಗು ಜಿಲ್ಲೆ | ಸೋಮವಾರ ಪೇಟೆ ತಾಲ್ಲೂಕು | ಕೊಡ್ಲಿಪೇಟೆ |
| 5 | ಬಳ್ಳಾರಿ ಜಿಲ್ಲೆ | ಕೂಡ್ಲಿಗಿ ತಾಲ್ಲೂಕು | ಕೂಡ್ಲಿಗಿ |

09/09/08